


ಆಡುಗೆಮನೆಯಲ್ಲಿ ಅವಳನ್ನು ಚುಂಬಿಸುತ್ತಿದ್ದೆಯಂತೆ!?... ನೋಡು ಅಹಿನೀವ್ ಇದು ನಿನ್ನ ವೈಯಕ್ತಿಕ ವಿಚಾರ. ನಾನು ಮೂಗು ತೂರಿಸುತ್ತಿದ್ದೇನೆಂದು ಕೋಪಮಾಡಿಕೊಳ್ಳಬೇಡ. ಇಂತದನೆಲ್ಲಾ ಸ್ವಲ್ಪ ಗುಟ್ಟಿನಲ್ಲಿ ಮಾಡಬೇಕೆಂದು ನಿನಗೆ ಹೊಳೆಯಲಿಲ್ಲವೆ? ಡಂಗುರ ಹೊಡೆಸಿ ತೋರಿಸಬೇಕಾ? ಏನೇ ಆಗಲಿ, ನೀನೊಬ್ಬ ಜವಾಬ್ದಾರಿಯುತ ಶಿಕ್ಷಕನೆನ್ನುವುದನ್ನು ಮರೆಯಬಾರದಿತ್ತು!'' ಎಂದರು.

ಇದನ್ನು ಕೇಳಿ ಅಹಿನೀವ್‌ಗೆ ಸಿಡಿಲು ಬಡಿದಂತಾಗಿ ಕುಸಿದು ಬೀಳುವುದೊಂದು ಬಾಕಿ. ಹೇಗೋ ಸಂಭಾಳಿಸಿಕೊಂಡು ಮನೆಯ ಕಡೆಗೆ ಹೆಜ್ಜೆ ಹಾಕಿದ. ಎಲ್ಲರೂ ತನ್ನನ್ನು ನೋಡಿ ಮುಸಿ ಮುಸಿ ನಗುತ್ತಿರುವಂತೆ ಭಾಸವಾಯಿತು. ಮನೆಯಲ್ಲೂ ಅವನಿಗೆ ನೆಮ್ಮದಿ ಕಾಣಲಿಲ್ಲ.

``ಇವತ್ತು ಯಾಕ್ರಿ ನೀವು ಸರಿಯಾಗಿ ಊಟ ಮಾಡುತ್ತಿಲ್ಲ?'' ಅವರ ಹೆಂಡತಿ ಕೇಳಿದಳು. ``ತುಂಬಾ ಬೇಜಾರಾಗಿರುವಂತೆ ಕಾಣಿಸುತ್ತಿದ್ದೀರಾ?... ಆ ಅಡುಗೆ ಮುಂಡೆ ಜತೆ ಚಕ್ಕಂದ ಆಡಿದ್ದು ಜ್ಞಾಪಕ ಬರ್ತಾ ಇರ್ಬೇಕು ಅಲ್ವ? ನನಗೆ ಎಲ್ಲಾ ಗೊತ್ತು ಕಣ್ರಿ! ಈ ವಯಸ್ಸಿನಲ್ಲೂ ನಿಮ್ಮ ಕಚ್ಚೆ ಹರಕುತನ ಬುದ್ಧಿ ಬಿಡಲಿಲ್ಲವಲ್ಲ? ಥೂ... ನಿಮ್ಮ ಜನ್ಮಕ್ಕಿಷ್ಟು ಬೆಂಕಿಹಾಕ!'' ಎನ್ನುತ್ತಾ ರಪ್ಪನೇ ಮುಖದ ಮೇಲೊಂದು ಬಿಗಿದಳು... ಅವಳ ಕಣ್ಣುಗಳು ಬೆಂಕಿ ಕಾರುತ್ತಿದ್ದವು.